ಸಂಚಿಕೆ ೭

ಜುಲೈ 2018

# ಚಿಗುರು ಚಿಲಿ ಪಿಲಿ ...ಮಾಸ ಪತ್ರಿಕೆ

ಚಿಗುರು ಕನ್ನಡ ಪಾಠಶಾಲೆ - ಶಾರ್ಲೆಟ್





ಚಿಗುರು ಕನ್ನಡ ಪಾಠಶಾಲೆ -ಶಾರ್ಲೆಟ್

ಸಂಚಿಕೆ ೭
ಜುಲೈ 2018

ಚಿಗುರು ಚಿಲಿ ಪಿಲಿ ...ಮಾಸ ಪತ್ರಿಕೆ
ಚಿಗುರು ಕನ್ನಡ ಪಾಠಶಾಲೆ - ಶಾರ್ಲೆಟ್

ಈ ಸಂಚಿಕೆಯಲ್ಲಿ ...

ಸಂಪಾದಕೀಯ ಪುಟ ೧
ಪೋಷಕರ ಅಂಕಣ ಪುಟ ೨
ಹಬ್ಬ ಪುಟ ೩
ಅ ಆ ಅಡ್ವೆಂಚರ್ ಪುಟ ೪
ಸಂದರ್ಶನ ಪುಟ ೫ -೬
ಪ್ರವಾಸ ಪುಟ ೭
ಚಿಣ್ಣರ ಚಿತ್ರ ಕಲೆ ಪುಟ ೮
ನಾ ಓದಿದ ಕಥೆ ಪುಟ ೯
ನಾ ಕಂಡ ಸಿನಿಮಾ ಪುಟ ೧೦
ಪದ ಹುಡುಕೋಣ ಪುಟ ೧೧
ಕ್ರೀಡೆ ಪುಟ ೧೨
ಪತ್ರ ಮಾಲೆ – ಮೂರ್ತಿ ತಾತ ಪುಟ ೧೩

## ಸಂಪಾದಕೀಯ: ರಜನೀ ಮಹೇಶ್

ಕರಾವಳಿಯಲ್ಲಿ ಹಬ್ಬಗಳಿಗೆ ವಿಶೇಷವಾದ ಸ್ಥಾನವಿದೆ. ತುಳಸಿ ಪೂಜೆ, ಹೊಸ್ತಿಲು ಪೂಜೆ(ಹೊಸ್ಲ್ ಅಜ್ಜಿ). ನಾಗಮಂಡಲ, ಭೂತಕೋಲ, ಭೂತಾರಾಧನೆ, ಜಕ್ಣಿ, ಹೊಸ್ತು, ರಂಗಪೂಜೆ , ಸೋಣೆ ಆರತಿ ಹೀಗೆ ಹಲವಾರು ಆಚರಣೆಗಳು ಉಡುಪಿ ಕುಂದಾಪುರದಲ್ಲಿ ಕಂಡು ಬರುತ್ತದೆ. ಸೂರ್ಯ ಸಿಂಹರಾಶಿಯನ್ನು ಪ್ರವೇಶಿಸಿದಾಗ ಸಿಂಹ ಸಂಕ್ರಮಣ, ಆ ದಿನ ಆಷಾಡ/ಆಟಿ ಮಾಸ ಮುಗಿದು ಶ್ರಾವಣ ಆರಂಭವಾಗುತ್ತದೆ. ಇದೇ ದಕ್ಷಿಣ ಕರಾವಳಿಯ ಸೋಣೆ ತಿಂಗಳು. ದೇವಸ್ಥಾನದಲ್ಲಿ ಸೋಣೆ ಆರತಿ, ಹೂವಿನ ಪೂಜೆ ಮುಂತಾದ ಶುಭಕಾರ್ಯಗಳು ನಡೆಯುತ್ತವೆ. ಹಾಗೆಯೇ ಪ್ರತಿ ಮನೆಯಲ್ಲಿಯೂ ಹೊಸಿಲು(ಹೊಸ್ತಿಲು) ಪೂಜೆ ಮಾಡುವುದು ಕ್ರಮ.

ಹೊಸಿಲು ಪೂಜೆಯ ದಿನ ಬೆಳಿಗ್ಗೆ ಗೃಹಿಣಿ ಮೊದಲು ಹೊಸಿಲನ್ನು ಶುಭ್ರವಾಗಿ ತೊಳೆದು ಶೇಡಿಯಿಂದ ಹೊಸಿಲು ಬರೆದು ನಂತರ ಸೋಣೆ ತಿಂಗಳು ಗದ್ದೆ ಬದಿಯಲ್ಲಿ(ಅಂಚು ಕಟ್ಟು) ಬೆಳೆಯುವ ಸೋಣೆ ಹೂವು ಮತ್ತು ಇತರೇ ಹೂವುಗಳಿಂದ ಅಲಂಕಾರ ಮಾಡುತ್ತಾರೆ. ಮೊದಲನೇ ದಿನ ನೈವೇದ್ಯಕ್ಕೆ ಒತ್ತು ಶಾವಿಗೆ ಮಾಡಿ ಹೊಸಿಲ ಅಜ್ಜಿಯನ್ನು ಸ್ವಾಗತಿಸುತ್ತಾರೆ ಕೈ ಮುಗಿದು ಹೊಸಿಲ ಮಹಾಲಕ್ಷ್ಮಿಗೆ ಗೃಹಿಣಿಯರು

ಹೊಸ್ಲೇ! ಹೊಸ್ಲೇ! ಹೊನ್ನ ಹೊಸ್ಲೇ!
ಚಿನ್ನದ್ ಗಿಂಡಿಲೆ ನೀರ್ ಇಡುವೆ ||
ಬಳ್ಳಿ ತಟ್ಟೆಲಿ ಹಾಲು ಇಡುವೆ
ಮುತ್ತಿನ ತಟ್ಟೇಲಿ ಹೂಕೊಯಿವೆ |
ಗಂಗಾ ದೇವಿಗೆ ಮಗಳಾದೆ ||
ಗೌರಿ ದೇವಿ ಸೊಸೆಯಾದೆ||
ಮುತ್ತಿನಂತ ಗಂಡನಿಗೆ
ತುಂಬು ಆಯುಷ್ಯವನು ಕೊಟ್ಟು|
ಮುತ್ತೈದೆ ಭಾಗ್ಯ ಹೆಚ್ಚಿಸಿ ಕೊಡು ಹೊಸ್ಲೆ ||



ಮನೆಯಲ್ಲಿ ಸುಖ-ಸಮೃದ್ಧಿಯು ತುಂಬಿ, ಗಂಗೆಯಂತಹ ಪವಿತ್ರವಾದ ಜೀವನವ ಮಾಡಿ, ಸದಾ ಮುತ್ತೈದೆಯಾಗಿ, ಜವಾಬ್ದಾರಿಗೆ ಹೆಗಲು ಕೊಡುವ ಶಕ್ತಿಯ ನೀಡೆಂದು ಹೊಸಿಲ ಮಹಾಲಕ್ಷ್ಮಿಯಲ್ಲಿ ಪ್ರಾರ್ಥಿಸುತ್ತಾರೆ.

ಅದೇ ರೀತಿ ರಾತ್ರಿ ಹೊಸಿಲಿಗೆ ದೀಪ, ನೀರು ಇಟ್ಟು ಅರಶಿನ ಕುಂಕುಮ ಹಚ್ಚಿ ನಮಸ್ಕರಿಸುತ್ತಾರೆ. ಹಲವಾರು ಬಗೆಯ ಹೂವುಗಳಿಂದ ಹೊಸಿಲನ್ನು ಅಲಂಕರಿಸುತ್ತಾರೆ. ದಿನಾಲೂ ವಿಶೇಷವಾದ ತಿಂಡಿಗಳನ್ನು ಮಾಡಿ ನೈವೇದ್ಯ ಮಾಡುತ್ತಾರೆ. ಮೊದಲು ಮನೆಯ ಗೃಹಿಣಿ, ತದನಂತರ ಮನೆಯ ಎಲ್ಲಾ ಹೆಣ್ಣು ಮಕ್ಕಳೂ ಹೊಸಿಲಿಗೆ ನಮಸ್ಕರಿಸಿ, “ಮುಸ್ಸಂಜೆ ಹೊತ್ತಲ್ಲಿ ಇರಿದು ಹಿರಣ್ಯಕಶಿಪುನ ಉಗರೊಳಗೆ ಸಿಗಳಿದ ನರಸಿಂಹಸ್ವಾಮಿ ಶರಣು, ಶರಣು, ಪ್ರಹ್ಲಾದನಿಗೆ ನರಸಿಂಹ ದೇವರು ಕೊಟ್ಟ ವರವ ನೀಡೆಮಗೆ” ಎಂದು ಪ್ರಾರ್ಥಿಸುತ್ತಾರೆ. ಅದೇನೆಂದರೆ ಮುಸ್ಸಂಜೆ ಹೊಸಿಲಲ್ಲಿ ಹಿರಣ್ಯಕಶಿಪುವ ಸಂಹರಿಸಿದ ನರಸಿಂಹ ದೇವರು ಪ್ರಹ್ಲಾದನಿಗೆ “ನಿನ್ನ ವಂಶದವರು ಅರಿಯದೇ ಯಾವುದೇ ತಪ್ಪು ಮಾಡಿದರೂ ನಾನು ಕ್ಷಮಿಸುವೆ” ಎಂದು. ಈ ಸೋಣೆತಿಂಗಳಲ್ಲಿ ಹೆಣ್ಣುಮಕ್ಕಳು ತವರಿಗೆ ಬಂದು ಹೊಸಿಲು ಪೂಜೆ ಮಾಡಿ, ಬಳೆ ತೊಡಿಸಿಕೊಂಡು ಹಿಂದಿರುಗುತ್ತಾರೆ. ಸೋಣೆ ತಿಂಗಳು ಆರಂಭವಾಗುವ ಸಂಕ್ರಮಣದಿಂದ ಒಂದು ತಿಂಗಳ ಕಾಲ ಈ ಆಚರಣೆ ಪ್ರತಿನಿತ್ಯ ನಡೆಸಲಾಗುತ್ತದೆ. ಮುಕ್ತಾಯದ ದಿನ ವಿಶೇಷವಾಗಿ ಹಲವಾರು ಜಾತಿಯ ಹೂವುಗಳಿಂದ ಹೊಸಿಲನ್ನು ಅಲಂಕಾರ ಮಾಡಿ, ನೈವೇದ್ಯಕ್ಕೆ ದೋಸೆಯನ್ನು ಮಾಡುತ್ತಾರೆ. ಪೂಜೆಯ ನಂತರ ಹೊಸ್ಲ್ ಅಜ್ಜಿಯನ್ನು ವಿಸರ್ಜಿಸುತ್ತಾರೆ.


ರಜನೀ


ಪ್ರಮಿತಿ


ಮೇಘನ


ಪ್ರೇರಣ


ಪ್ರದ್ಯುಮ್ನ



ಹಚ್ಚೇವು ಕನ್ನಡದ ದೀಪ...



## ಪೋಷಕರ ಅಂಕಣ :
## ನಾನು ನನ್ನ ಕನಸು ...- ಮಂಜುನಾಥ್ ಸಿದ್ದರಾಮಯ್ಯ

ಪುಟ್ಟ ಪುಟ್ಟ ಕೈ ಪುಟ್ಟ ಪುಟ್ಟ ಬಾಯಿ...
ನನ್ನ ಪುಟ್ಟ ಕೈ ನನ್ನ ಪುಟ್ಟ ಬಾಯಿ..
ಪುಟ್ಟ ಪುಟ್ಟ ಕಣ್ ಪುಟ್ಟ ಪುಟ್ಟ ಕಾಲು..
ನನ್ನ ಪುಟ್ಟ ಕಣ್ ನನ್ನ ಪುಟ್ಟ ಕಾಲು.. ಈ ಪುಟ್ಟ ಕೈ,ಪುಟ್ಟ ಕಾಲು,ಪುಟ್ಟ ಕಣ್ಣು,ಪುಟ್ಟ ಬಾಯಿಯ ಮಕ್ಕಳು ನಮಗೆ ಗೊತ್ತಾಗದ ಹಾಗೆ ಬೆಳೆದು ದೊಡ್ಡವರಾಗುತ್ತಾರೆ!

ಕಳೆದವಾರ ನಾನು ಮತ್ತು ನನ್ನ ಸ್ನೇಹಿತರು ಪ್ರವಾಸಕ್ಕೆ ಹೋಗಿದ್ದೆವು. ನನ್ನಾಕೆ ಮತ್ತು ನನ್ನ ಮಗಳು ಮನೆಯಲ್ಲೇ ಇದ್ದರು. ಇದೇ ಮೊದಲ ಬಾರಿ ನಾನು ಅವರಿಬ್ಬರನ್ನು ಬಿಟ್ಟು ಹೋಗಿದ್ದು. 4 ದಿನದ ನಂತರ ನಾನು ಮನೆಗೆ ರಾತ್ರಿ ಡ್ರೈವ್ ಮಾಡ್ತ ಇದ್ದೆ. ಸುಮಾರು ರಾತ್ರಿ 11.45 ಆಗಿತ್ತು, ಮನೆ ಹತ್ತಿರವಾಗುತ್ತ ಇದ್ದ ಹಾಗೆ ತಲೆಯಲ್ಲಿ ಸಾವಿರ ಯೋಚನೆಗಳು, ಅದರಲ್ಲಿ ಮೊದಲು ನನ್ನ ಮಗಳು. ನನಗೆ ಖಂಡಿತವಾಗಿ ನನ್ನ ಮಗಳು ನನಗಾಗಿ ಕಾಯುತ್ತಾ ಇರುತ್ತಾಳೆ ಅಂತ. ರಾತ್ರಿ 12 ಆಗಿದ್ದರಿಂದ ಮಲಗಿ ಬಿಟ್ಟಿರಬಹುದು ಅಂದುಕೊಂಡೆ. ಮನೆಗೆ ಬಂದ ಮೇಲೆ ತಳಮಳದಿಂದ ಗರಾಜು ತೆಗೆದೆ. ನನ್ನ ಕಾರಿನ ಹೆಡ್ ಲೈಟ್ ಕತ್ತಲೆಯಲ್ಲಿ ದೊಡ್ಡದಾಗಿ ಕಾಣುತ್ತಾ ಇತ್ತು. ಇನ್ನು ಗರಾಜು ಡೋರ್ ಅರ್ಧ ತೆಗೆದಿತ್ತು. ನನ್ನ ನಂಬಿಕೆ ಸುಳ್ಳಾಗಿರಲಿಲ್ಲ, ನನ್ನ ಮಗಳು ಪ್ರಪಂಚದ ಅತಿಸುಂದರವಾದ ಒಡವೆ ಯಾದ "ಸ್ಮೈಲ್" ಅನ್ನು ಇಟ್ಟುಕೊಂಡು ಕಾಯ್ತಾ ಇದ್ದಳು. ಅವಳು ಪಪ್ಪ ಅಂದ ಕೂಡಲೇ ನಾನು ಕರಗಿಹೋದೆ. ಕಾರಿನಿಂದ ಇಳಿದು ಹೋಗಿ ಬಾಚಿ ಬಿಗಿದಪ್ಪಿ ಮುದ್ದಿಸಿದೆ. ಆ ಘಳಿಗೆಯನ್ನು ನಾನು ನನ್ನ ಜೀವನದಲ್ಲಿ ಎಂದಿಗೂ ಮರೆಯುವುದಿಲ್ಲ. ತಂದೆಯಾಗಿ ನಾನು ಮಗಳಿಗೆ ಯಾವ ಆಟಿಕೆ, ಪುಸ್ತಕ, ವಿಡಿಯೋ ಗೇಮ್ ಕೊಟ್ಟರೂ ಇದೆಲ್ಲಕ್ಕಿಂತ ಅವಳಿಗೆ ಅತೀ ಪ್ರೀತಿ ಪಾತ್ರ ವಾದವನು ನಾನು ಮತ್ತು ನನ್ನ ಜೊತೆ ಕಳೆಯುವ ಸಮಯ. ಇದು ಅಂದು ನಾನು ಕಲಿತ ದೊಡ್ಡ ಪಾಠ.

ನಾನು ಆ ಕ್ಷಣದಲ್ಲಿ ನಿರ್ಧರಿಸಿದೆ, ಇನ್ನು ಮೇಲೆ ನನ್ನ ಮಗಳಿಗೆ ಇನ್ನೂ ಹೆಚ್ಚಿನ ಸಮಯ ಮಾಡಿಕೊಬೇಕು, ನಾನು ಕೊಡುತ್ತಿರುವ ಸಮಯ ಸಾಲುತ್ತಿಲ್ಲ. ದಿನ ಸ್ವಲ್ಪ ಮಾತು, ದಿನಚರಿ, ಒಂದು ಗೇಮ್, ಒಂದು ಬೆಡ್ ಟೈಂ ಸ್ಟೋರಿ, ಒಂದು ಹಗ್, ಒಂದು ಕಿಸ್ ಇಷ್ಟೇ ಅವರು ಕೇಳುವುದು. ಇದಕ್ಕಿಂಥ ಜಾಸ್ತಿ ಅವರಿಗೆ ಬೇರೆ ಏನೂ ಬೇಡ.

ಮಕ್ಕಳಿಗೆ ಅಪ್ಪ ಅಮ್ಮನೆ ಪ್ರಪಂಚ. ಅವರು ಪ್ರಪಂಚವನ್ನು ನೋಡುವುದು ನಾವು ನೋಡುವ ರೀತಿಯಿಂದಲೇ. ನಾವು ಮಕ್ಕಳಿಗೆ ಆಚಾರ, ವಿಚಾರ ಮತ್ತು ಭಾಷೆಯನ್ನು ಕಲಿಸುವ ಸುಲಭವಾದ ರೀತಿಯೆಂದರೆ ನಾವು ಅವರ ಜೊತೆ ಕೂಡಿ ಆಡಬೇಕು, ಮಾತಾಡಬೇಕು, ಸಮಯ ಕಳೆಯಬೇಕು. **"ಮನೆಯೇ ಮೊದಲ ಪಾಠ ಶಾಲೆ "** ಎಂಬ ಮಾತಿನಂತೆ ಮಕ್ಕಳಿಗೆ ನಾವೇ ಮಾದರಿ ಆಗಬೇಕು.






## ನಾಗರ ಪಂಚಮಿ ಮತ್ತು ರಕ್ಷಾಬಂಧನ - ಪ್ರೇರಣ ಗೌಡ

1. ರಕ್ಷಾ ಬಂಧನ:

ಒಡಹುಟ್ಟಿದವರ ನಡುವೆ ಆಚರಿಸಲ್ಪಡುವ ಈ ರಕ್ಷಾ ಬಂಧನ ಹಬ್ಬ ಕೇವಲ ಒಡಹುಟ್ಟಿದವರಿಗೆ ಮಾತ್ರವಲ್ಲದೆ ಎಲ್ಲಾ ಬಗೆಯ ಸಹೋದರ -ಸಹೋದರಿ ಸಂಬಂಧಗಳನ್ನು ಬಾಂಧವ್ಯವನ್ನು ಗಟ್ಟಿಗೊಳಿಸುವಂತಹ ದಿನ. ಸಹೋದರನಿಗೆ ರಾಖಿಯನ್ನು ಕಟ್ಟಿ ಅವರಿಂದ ಉಡುಗೊರೆಯನ್ನು ಪ್ರತಿಯಾಗಿ ಪಡೆಯುವ ಈ ದಿನಕ್ಕಾಗಿ ವರ್ಷಪೂರ್ತಿ ಸಹೋದರಿಯರು ಎದುರು ನೋಡುತ್ತಿರುತ್ತಾರೆ. ರಕ್ಷಾ ಬಂಧನದ ಸಂಸ್ಕೃತದ ಅರ್ಥ "ರಕ್ಷಣೆಯ ಗಂಟು" ಎಂಬುದು.

ಶಾಸ್ತ್ರೋಕ್ತವಾಗಿ ಸಹೋದರರು ಮತ್ತು ಅವರ ಸಹೋದರಿಯರ ನಡುವಿನ ಪ್ರೀತಿಯ ಬಂಧವನ್ನು ಆಚರಿಸುವ ಒಂದು ಪುರಾತನ ಹಿಂದೂ ಹಬ್ಬವಾಗಿದೆ. ಸಹೋದರಿ ತನ್ನ ಪ್ರೀತಿ ಮತ್ತು ತನ್ನ ಸಹೋದರನ ಒಳಿತನ್ನು ಬಯಸಿ ದೇವರಿಗೆ ಪ್ರಾರ್ಥನೆ ಸಲ್ಲಿಸಿ ರಾಖಿ ಸಮಾರಂಭವನ್ನು ಆಚರಿಸುತ್ತಾಳೆ. ಇದಕ್ಕೆ ಪ್ರತಿಯಾಗಿ, ಸಹೋದರನು ತನ್ನ ಸಹೋದರಿಯನ್ನು ರಕ್ಷಿಸುವ ಮತ್ತು ಎಲ್ಲಾ ಸಂದರ್ಭಗಳಲ್ಲಿ ಆಕೆಯ ಆರೈಕೆಯನ್ನು ಮಾಡುವ ಶಾಸ್ತ್ರೋಕ್ತ ಶಪಥ ಮಾಡುತ್ತಾನೆ. ಕೌಟುಂಬಿಕವೆಂದು ದೃಢೀಕರಿಸಲಾಗುವ ಹಲವಾರು ಸಮಾರಂಭಗಳಲ್ಲಿ ಇದು ಕೂಡ ಒಂದಾಗಿದೆ.

ರಕ್ಷಾ ಬಂಧನ ಹಬ್ಬದ ಕೆಲವು ದಿನಗಳ ಮೊದಲು, ಮಹಿಳೆಯರು ರಾಖಿಗಳನ್ನು ಖರೀದಿಸಲು ಆರಂಭಿಸುತ್ತಾರೆ. ಕೆಲವು ಸಹೋದರಿಯರು ತಾವೇ ಸ್ವತಃ ರಾಖಿಯನ್ನು ತಯಾರಿಸಿದರೆ ಇತರರು ಮಾರುಕಟ್ಟೆಯಿಂದ ಖರೀದಿಸುತ್ತಾರೆ. ಅದೇನೇ ಇದ್ದರೂ ರಾಖಿಯನ್ನು ಸಹೋದರರಿಗೆ ಕಟ್ಟುವುದೇ ಈ ದಿನದ ವಿಶೇಷ.

2. **ನಾಗರ ಪಂಚಮಿ:**


ನಾಗರ ಪಂಚಮಿ ಹಬ್ಬವನ್ನು ಭಾರತದ ಹಲವು ಭಾಗಗಳಲ್ಲಿ ಹಿಂದುಗಳು ಆಚರಿಸುತ್ತಾರೆ. ಆದರೆ ಕರ್ನಾಟಕದಲ್ಲಿ ಇದಕ್ಕೆ ಮತ್ತಷ್ಟು ಮಹತ್ವದ ಸ್ಥಾನವಿದೆ. ಈ ದಿನ ಹಾವಿಗೆ ಹಾಲೆರೆದು, ಪೂಜಿಸಿ, ಸಕಲ ಇಷ್ಟಾರ್ಥಗಳೂ ಪ್ರಾಪ್ತಿಯಾಗುವಂತೆ ನಾಗದೇವನನ್ನು ಬೇಡುವುದು ವಾಡಿಕೆ. ಈ ದಿನ ಶೇಷ ನಾಗ ಮತ್ತು ಶ್ರೀ ವಿಷ್ಣುವನ್ನು ಭಕ್ತಿಯಿಂದ ಸ್ತುತಿಸಲಾಗುತ್ತದೆ.

ಪುರಾಣ ಕತೆಯೊಂದರ ಪ್ರಕಾರ ಹಾವು ಕಚ್ಚಿ ಮಡಿದ ತನ್ನ ಸಹೋದರನನ್ನು ಸಹೋದರಿಯೊಬ್ಬಳು ಬದುಕಿಸಿಕೊಂಡ ದಿನ ಶ್ರಾವಣ ಮಾಸದ ಶುಕ್ಲಪಕ್ಷದ ಪಂಚಮಿಯಾಗಿತ್ತು. ಹಾವನ್ನು ಭಕ್ತಿಭಾವದಿಂದ ಪೂಜಿಸಿ ತನ್ನ ಅಣ್ಣನನ್ನು ತಂಗಿ ಬದುಕಿಸಿಕೊಂಡ ದಿನವಾಗಿದ್ದರಿಂದ ಈ ದಿನವನ್ನು ಭ್ರಾತೃತ್ವದ ಸಂಕೇತವಾಗಿಯೂ ಕೆಲವೆಡೆ ಆಚರಿಸಲಾಗುತ್ತದೆ.

## ಅ ಆ ಅಡ್ವೆಂಚರ್: ಪ್ರಮಿತಿ ಉಪಾಧ್ಯ




## ರಂಗ್ ರಂಗ್ ರಂಗೋಲಿ







## ಸಂಗೀತ ಗುರು ಶ್ರೀ ಸದಾಶಿವ ಭಟ್ ಅವರೊಂದಿಗೆ ಒಂದು ಸಂಜೆ : ಪ್ರಕೃತಿ ಉಪಾಧ್ಯ

ಶ್ರೀ.ಸದಾಶಿವ ಭಟ್ಟರು, ಕೇರಳದ ನೆಲ್ಲಿಕುಂಜೆಯ ಗುತ್ತು ಎನ್ನುವ ಸಣ್ಣ ಹಳ್ಳಿಯಲ್ಲಿ ದೊಡ್ಡ ಸಂಗೀತ ಕುಟುಂಬದಲ್ಲಿ ಹುಟ್ಟಿ ಬೆಳೆದರು. 9 ಜನ ಒಡಹುಟ್ಟಿದವರೊಂದಿಗೆ ಬೆಳೆದ ಸದಾಶಿವ ಭಟ್ಟರ ಹೊಂದಿಕೊಂಡು ಹೋಗುವ ಮನೋಭಾವ ಜನರು ಪ್ರೀತಿಯಿಂದ “ಭಟ್ ಅಂಕಲ್” ಅಂತ ಕರೆಸಿಗೊಳುವಂತೆ ಮಾಡಿತು. ತಂದೆ ಮರದ ತುಂಡನ್ನು ವಯೊಲಿನ್ಗೆ(ಪಿಟೀಲು) ರೂಪಾಂತರ ಮಾಡುವುದನ್ನು ನೋಡುವ ಖುಶಿ, ಈ ವಾದ್ಯದೊಂದಿಗೆ ದೃಢವಾದ ಬಾಂಧವ್ಯ ಮತ್ತು ಅಡಿಪಾಯವನ್ನು ಹಾಕಿತು.


ಸಣ್ಣವರಿದ್ದಾಗ ಗುರುಗಳು 2 ತಿಂಗಳಿಗೊಮ್ಮೆ ಮನೆಗೆ ಬಂದು ಅಲ್ಲಿ ಕೆಲವು ದಿನಗಳ ಸಂಗೀತ ಸಮಾರಾಧನೆ ನಡೆಸುತ್ತಿದ್ದರು. ಇಂತಹ ವಾತಾವರಣದಲ್ಲಿ ಬೆಳೆದ ಸದಾಶಿವ ಭಟ್ಟರಿಗೆ ಕಾಲೇಜಿನಲ್ಲಿ ಸಂಗೀತದ ಸಂಪರ್ಕ ಸಾಂಪ್ರದಾಯಿಕ ರೀತಿಯಲ್ಲಿ ಕಡಿಮೆಯಾಯಿತು. ಆದರೆ ಐಐಟಿಯಲ್ಲಿ ಸಂದರ್ಭ ಸಿಕ್ಕಿದ ಕೂಡಲೆ ಹಿಂದುಸ್ತಾನಿ ಸಂಗೀತದಲ್ಲಿ ತರಬೇತಿ ಪಡೆದುಕೊಂಡರು. ಅದೇ ಸಮಯಕ್ಕೆ ಅವರು ಏಕಲವ್ಯನಂತೆ ತಮಾಷೆಗೆ ಕೊಳಲು ಬಾರಿಸಲು ಕಲಿತುಕೊಂಡರು ಮತ್ತು ವಯೊಲಿನ್ ವಾದನದ ಅಭ್ಯಾಸವನ್ನು ಮುಂದುವರೆಸಿದರು. ಸುಮಾರು ವರ್ಷಗಳ ನಂತರ ಬೆಂಗಳೂರಿನಲ್ಲಿ ಆರ್. ಆರ್. ಕೇಶವಮೂರ್ತಿಯವರ ಬಳಿ ಮಗಳೊಂದಿಗೆ ಸಂಗೀತ ಕಲಿಯುವ ಸುವರ್ಣ ಅವಕಾಶ ಒದಗಿ ಬಂದಿತು. ಈ ಅವಕಾಶ ಅವರ ಸಂಗೀತ ಯಾತ್ರೆಯ ಒಂದು ದೊಡ್ಡ ಮೈಲುಗಲ್ಲು ಎನ್ನಬಹುದು.

ಹೀಗೇ ಜೀವನದ ಎಲ್ಲಾ ಘಟಕದಲ್ಲೂ ಸಂಗೀತ ಅವರ ಜೊತೆಗಾರನಾಯಿತು. ಸಂಗೀತಾಭ್ಯಾಸ, ಕವನ ರಚನೆ,ಸ್ವರ ಸಂಯೋಜನೆ ಇದೆಲ್ಲ ಸದಾಶಿವ ಭಟ್ಟರ ಜೀವನದ ಅವಿಭಾಜ್ಯ ಅಂಗವಾಯಿತು, ಅಂಗವಾಗಿದೆ. ಇವರು ಸುಮಾರು 20-25 ಕವನಗಳನ್ನು ರಚಿಸಿ ಅದಕ್ಕೆ ಸ್ವರ ಸಂಯೋಜನೆ ಮಾಡಿದ್ದಾರೆ.

ಸದಾಶಿವ ಭಟ್ಟರ ಸಂಗೀತ ಸಾಧನೆಯ ಪ್ರತಿಫಲವನ್ನು ಅಮೇರಿಕದಲ್ಲಿ ಅನೇಕ ಜನರು ಆನಂದಿಸಿದ್ದಾರೆ. ಶಾರ್ಲೆಟ್ ನಲ್ಲಿ ದೇವರ ನಾಮ ಗುಂಪಿನಲ್ಲಿ ಗುರು ರೂಪದಲ್ಲಿ ಗುಂಪಿಗೆ ಆಧಾರ ಮತ್ತು ಪ್ರೋತ್ಸಾಹ ಒದಗಿಸಿದ್ದಾರೆ. ತ್ಯಾಗರಾಜ ಆರಾಧನೆ ಕಾರ್ಯಕ್ರಮದ ಪ್ರಥಮ ಕಛೇರಿಯಿಂದ ಪಾರಂಭವಾಗಿ ಇಂತು ವರ್ಷದವರೆಗೆ ಭಾಗವಹಿಸಿದ್ದಾರೆ. ಸುಮಾರು 100ರ ಮೇಲೆ ಸಂಗೀತಾರ್ಥಿಗಳಿಗೆ ಸಂಗೀತ, ವಯೊಲಿನ್ ಹಾಗು ಕೊಳಲು ಹೇಳಿ ಕೊಡುವ ಸೌಭಾಗ್ಯವನ್ನು ಸದಾಶಿವ ಭಟ್ಟರು ಕೃತಜ್ಞತೆಯಿಂದ ನೆನಪಿಸಿಕೊಳ್ಳುತ್ತಾರೆ.

**ಗುರು ಪೂರ್ಣಿಮೆಯ ಪ್ರಯುಕ್ತ ನಾನು ಮತ್ತು ನನ್ನ ಸಂಗೀತ ಗುರು ಶ್ರೀ ಸದಾಶಿವ ಭಟ್ಟರ ಒಂದು ಸಣ್ಣ ಸಂದರ್ಶನ :**





<u>ನಾನು ಮತ್ತು ನನ್ನ ಸಂಗೀತ ಗುರು ಶ್ರೀ ಸದಾಶಿವ ಭಟ್ಟರ ಸಂದರ್ಶನದ ಒಂದು ತುಣುಕು:</u>

**ಪ್ರಕೃತಿ** : ನೀವು ಯಾವಾಗ ಸಂಗೀತ ಕಲಿಯೋಕೆ ಶುರು ಮಾಡಿದ್ರಿ?

**ಅಂಕಲ್** : ನಾನು ಸಂಗೀತ ಕಲಿಯೋಕೆ ಶುರು ಮಾಡುವಾಗ ನಾನು 6 ನೇ ತರಗತಿಯಲ್ಲಿದ್ದೆ.

**ಪ್ರಕೃತಿ** : ನೀವು ಎಷ್ಟು ವರ್ಷ ಸಂಗೀತ ಕಲಿತಿದ್ರಿ?

**ಅಂಕಲ್** : ತಂದೆಯವರ ಹತ್ರ ಮೂರು ವರ್ಷ , ಮೇಸ್ಟ್ರು ಹತ್ರ ಒಂದು ೨ ವರ್ಷ , ದೆಹಲಿಯಲ್ಲಿ ಹಿಂದುಸ್ತಾನಿ ಮ್ಯೂಸಿಕ್ ಮೇಸ್ಟ್ರು ಹತ್ರ ೨ ವರ್ಷ. ಮತ್ತೆ ಬೆಂಗಳೂರಿನಲ್ಲಿ ೨ ವರ್ಷ ಆರ್. ಆರ್. ಕೇಶವ ಮೂರ್ತಿ ಅವರ ಹತ್ರ ಕಲಿತಿದ್ದೇನೆ. ಒಟ್ಟು ೧೨ ವರ್ಷ.

**ಪ್ರಕೃತಿ :** ನಿಮ್ಮ ಎಲ್ಲ ಗುರುಗಳ ಬಗ್ಗೆ ಸ್ವಲ್ಪ ಹೇಳಿ.

ತಂದೆಯವರು ತಂಜಾವೂರಿಗೆ ಹೋಗಿ ಸಂಗೀತ ಕಲಿತು ಬಂದವರು. ಹಾರ್ಮೋನಿಯಂ, ಮೃದಂಗ, ಪಿಟೀಲು ನುಡಿಸುತ್ತಾ ಇದ್ರು. ಹಾಡುತಾ ಇದ್ರು. ಪಿಟೀಲು ಮಾಡುತ ಇದ್ರು. ತಂಬೂರಿ ಕೂಡ ಮಾಡಿದ್ರು. ನನ್ನ ಮೇಸ್ಟ್ರು ಮದೂರು ಪದ್ಮನಾಭ ಶರಳಾಯರು ಕೂಡ ತಂಜಾವೂರಿಗೆ ಹೋಗಿ ಸಂಗೀತ ಕಲಿತು ಬಂದಿದ್ರು. ಮೂರನೆಯವರಾಗಿ ಮಾಸ್ಟರ್ ತಾರಾ ಸಿಂಗ್ , ಅವರು ಮೊದಲು ಫಿಲಂ ಇಂಡಸ್ಟ್ರಿ ಯಲ್ಲಿ ಇದ್ರು. ಮತ್ತೆ ಅದನ್ನು ಬಿಟ್ಟು ಕ್ಲಾಸಿಕಲ್ ಮ್ಯೂಸಿಕ್ ಹೇಳಿಕೊಡುತ್ತಾ ಇದ್ರು. ಐ.ಐ ಟಿ ದೆಹಲಿಯಲ್ಲಿ ಮ್ಯೂಸಿಕ್ ಕ್ಲಬ್ ಗೆ ಬಂದು ಹೇಳಿಕೊಡುತ್ತಾ ಇದ್ರು. ಅವರು ತಬಲಾ, ಹಾರ್ಮೋನಿಯಮ್, ಸಿತಾರ್ ನುಡಿಸುತಾ ಇದ್ರು. ಹಾಡುತಾ ಇದ್ರು. ಅವರ ಹತ್ತಿರ ೨ ವರ್ಷ ಕಲಿತೆ. ಆರ್.ಆರ್.ಕೇಶವ್ ಮೂರ್ತಿ ಅಂತ ಬೆಂಗಳೂರಿನಲ್ಲಿ ಇದ್ರು. ಬಿಡಾರಂ ಕೃಷ್ಣಪ್ಪನವರು ಅವರ ಗುರು. ಚೌಡಯ್ಯನವರೂ ಕೂಡ ಇವರ ಶಿಷ್ಯರೆ. ಕೇಶವ್ ಮೂರ್ತಿಯವರು ೭ ತಂತಿ ಪಿಟೀಲು ನುಡಿಸುತ್ತಿದ್ದರು. ಅವರು A ಗ್ರೇಡ್ ರೇಡಿಯೋ ಆರ್ಟಿಸ್ಟ್. ನಾನು ಅವರನ್ನು ಕೆಲವು ಸಲ ರೇಡಿಯೋ ಸ್ಟೇಷನ್ ಗೆ ಸ್ಕೂಟರ್ ನಲ್ಲಿ ಕರೆದುಕೊಂಡು ಹೋಗಿದ್ದೆ. ೨ ವರ್ಷ ನಾನು ಮತ್ತು ಅರ್ಚನ ಅವರ ಹತ್ರ ಸಂಗೀತ ಕಲಿತಿದ್ವಿ.

**ಪ್ರಕೃತಿ :** ನೀವು ಕೊಳಲು ಮತ್ತು ವಯೊಲಿನ್ ಕಲಿತಿದೀರ. ಈ ಎರಡೂ ಇನ್ಸ್ಟ್ರುಮೆಂಟ್ಸ್ ಕಲಿಯೋಕೆ ಸ್ಫೂರ್ತಿ ಯಾರು?

**ಅಂಕಲ್** : ವಯೊಲಿನ್ಗೆ ನನ್ನ ತಂದೆಯವರೇ ಇನ್ಸ್ಪಿರೇಷನ್. ಅವರು ವಯೊಲಿನ್ ಮಾಡುತಾ ಇದ್ರು, ಹೇಳಿಕೊಡುತ ಇದ್ರು. ಮನೆಯಲ್ಲಿ ತಂದೆಯವರು ಮಾಡಿದ ೧೦ ವಯೊಲಿನ್ ಇತ್ತು. ಏಳು ತಂತಿ ವಯೊಲಿನ್ ಕೂಡ ಇತ್ತು ನಮ್ಮ ಮನೇಲಿ. ಅದನ್ನು ಕೂಡ ತಂದೆಯವರೇ ಮಾಡಿದ್ದು. ಕೊಳಲಿಗೆ ಸ್ಫೂರ್ತಿ ಏನು ಅಂದ್ರೆ, ದೆಹಲಿಗೆ ಹೋದಾಗ ವಯೊಲಿನ್ ಕೊಂಡು ಹೋಗಿರಲಿಲ್ಲ. ಅಲ್ಲಿ ಅಂಗಡಿಯಲ್ಲಿ ಕೊಳಲು ಸಿಗುತ್ತಾ ಇತ್ತು. ಒಂದು ಕೊಳಲು ಪರ್ಚೆಸ್ ಮಾಡಿದೆ, ಹಾಸ್ಟೆಲ್ ನಲ್ಲಿ ನುಡಿಸುತ್ತಾ ಇದ್ದೆ. ತುಂಬಾ ಪ್ರಾಕ್ಟೀಸ್ ಮಾಡುತ ಇದ್ದೆ. ಫಿಲ್ಮ್ ಸಾಂಗ್ಸ್ ಎಲ್ಲಾ ನುಡಿಸಲಿಕ್ಕೆ ಒಳ್ಳೆ ಅಭ್ಯಾಸ ಆಯಿತು.

**ಪಕೃತಿ** : ನಿಮಗೆ ಯಾವ ಇನ್ಸ್ಟ್ರುಮೆಂಟ್ ಇಷ್ಟ ?

**ಅಂಕಲ್** : ಸ್ವಲ್ಪ ಡಿಫಿಕಲ್ಟ್ ಟು ಸೇ. ನನಗೆ ನಿಜವಾಗ್ಲೂ ಇಷ್ಟ ಕೊಳಲು. ಒಳ್ಳೆ ಸೌಂಡ್ ಇರುತ್ತದೆ, ಕೊಂಡೊಯ್ಯಲು ಸುಲಭ, ಹಾಗೆ ಸೌಂಡ್ ದೂರ ಕೇಳಿಸುತ್ತೆ. ಅಭ್ಯಾಸ ಮಾಡಿದ್ರೆ ಗಮಕ ಕೂಡ ನುಡಿಸಲಿಕ್ಕೆ ಆಗುತ್ತೆ ಅದರಲ್ಲಿ. ವಯೊಲಿನ್ ಹಾಗಲ್ಲ, ಅದು ತುಂಬ ಡೆಲಿಕೇಟ್ ಇನ್ಸ್ಟ್ರುಮೆಂಟ್ . ಶ್ರುತಿ ಬೇಗ ಚೇಂಜ್ ಆಗುತ್ತೆ. ತಂತಿ ತುಂಡಾಗುತ್ತೆ. ಬೋ ಹೇರ್ ಎಲ್ಲ ಕಟ್ ಆಗುತ್ತೆ. ಜಾಗ್ರತೆ ತಕೊಂಡು ಹೋಗ್ಬೇಕು. ತುಂಬಾ ಅಭ್ಯಾಸ ಮಾಡಬೇಕು.

**ಪ್ರಕೃತಿ :** ನೀವು ಎಷ್ಟು ವರ್ಷದಿಂದ ಸಂಗೀತ ಹೇಳಿಕೊಡುತ್ತಾ ಇದ್ದೀರಾ?

**ಅಂಕಲ್** : ಬಹಳ ವರ್ಷದಿಂದ ಹೇಳಿಕೊಡುತ್ತಾ ಇದೀನಿ. ೧೨ ವರ್ಷದಲ್ಲಿ ನಾನು ಹೇಳಿಕೊಡೋಕೆ ಶುರು ಮಾಡಿದ್ದೆ. ಯಾರಾದ್ರು ಮನೆಗೆ ಬಂದ್ರೆ ತಂದೆಯವರು ಇಲ್ಲದಿದ್ರೆ, ಅವರಿಗೆ ಹೇಳಿಕೊಡುತ್ತಿದ್ದೆ, ತಂಗಿಗೆ ಹೇಳಿಕೊಡುತ್ತಿದ್ದೆ. ಹಾಸ್ಟೆಲ್ನಲ್ಲಿ ಇದ್ದಾಗ ಬಾಕಿ ಸ್ಟೂಡೆಂಟ್ಸ್ ಗಳಿಗೆ ಹೇಳಿಕೊಡುತ್ತಿದ್ದೆ.ಹಾಗೆಯೇ ಕಾಲೇಜಿನಲ್ಲಿ ಮೇಸ್ಟ್ರುಗಳು ಮನೆಗೆ ಕರೀತಾ ಇದ್ರು. ಟ್ಯೂನ್ ಮಾಡೋಕೆ ಹೆಲ್ಪ್ ಮಾಡುತ್ತಾ ಇದ್ದೆ, ಹೇಳಿ ಕೊಡುತ್ತಾ ಇದ್ದೆ. ಮದುರೈ ನಲ್ಲಿ ಒಬ್ಬಳು, ಬೆಂಗಳೂರಿನಲ್ಲಿ ಒಬ್ಬ ಸ್ಟೂಡೆಂಟ್ ಇದ್ದ. ಇಲ್ಲಿ ಬಂದ ನಂತರ ತುಂಬಾ ಸ್ಟೂಡೆಂಟ್ ಆದ್ರು.

**ಪ್ರಕೃತಿ** : ನಿಮಗೆ ಇಷ್ಟವಾದ ಮ್ಯೂಸಿಷಿಯನ್ ಯಾರು ಮತ್ತು ಯಾಕೆ?

**ಅಂಕಲ್** : ಡಾ. ಎಮ್. ಬಾಲಮುರಳಿಕೃಷ್ಣ. ಯಾಕೆಂದ್ರೆ ಅವರು ಸ್ವಂತ ಸಾಧನೆಯಿಂದ ಮೇಲೆ ಬಂದವರು. ತ್ಯಾಗರಾಜರ ಶಿಷ್ಯ ಪರಂಪರೆಯಲ್ಲಿ ಅವರು ೫ ನೆಯ ತಲೆಮಾರಿನವರು. ಅವರೇ ಎಷ್ಟೋ ಕೀರ್ತನೆಗಳನ್ನು ಮಾಡಿದ್ದಾರೆ. ಸಿನಿಮಾಗಳಿಗೆ ಹಾಡಿದ್ದಾರೆ, ಆಕ್ಟಿಂಗ್ ಕೂಡ ಮಾಡಿದ್ದಾರೆ. ಹೊಸ ಹೊಸ ರಾಗ ಮತ್ತು ತಾಳಗಳನ್ನು ಮಾಡಿದ್ದಾರೆ. ಆದ ಕಾರಣ ಅವರು ನನಗೆ ಇಷ್ಟ.

**ಪ್ರಕೃತಿ** : ನಿಮ್ಮ ಫ್ರೀ ಟೈಮ್ನಲ್ಲಿ ಏನು ಮಾಡುತ್ತೀರಾ? ನಿಮ್ಮಗೆ ಇನ್ನು ಯಾವ ಹವ್ಯಾಸಗಳಿವೆ?

**ಅಂಕಲ್ :** ನನಗೆ ಫೋಟೋಗ್ರಾಫಿ ಇಷ್ಟ.

**ಪ್ರಕೃತಿ :** ಇಲ್ಲಿ ಬೆಳೆಯುತ್ತಿರುವ ಮಕ್ಕಳಿಗೆ ಸಂಗೀತದ ಬಗ್ಗೆ ಏನು ಹೇಳೋಕೆ ಇಷ್ಟ ಪಡುತ್ತೀರಾ?

**ಅಂಕಲ್**: ಸಂಗೀತ ದಿನಾಲು ಅಭ್ಯಾಸ ಮಾಡಬೇಕು.ಅದು ಬೋರಿಂಗ್ ಅಂದುಕೊಳ್ಳಬಾರದು. ಯಾರ ಒತ್ತಾಯಕ್ಕೆ ಮಾಡಬಾರದು.ನಾವೇ ವಾಲಂಟೀರ್ ಆಗಿ ಕುಳಿತುಕೊಂಡು ಪ್ರಾಕ್ಟೀಸ್ ಮಾಡಬೇಕು.

**ಪ್ರಕೃತಿ** : ನಮ್ಮ ಚಿಗುರು ಕನ್ನಡ ಪಾಠಶಾಲೆ ಮಕ್ಕಳಿಗೆ ಏನಾದ್ರು ಮೆಸೇಜ್ ಹೇಳುತೀರಾ?

**ಅಂಕಲ್ :** ಕನ್ನಡ ಬಹಳ ಸುಲಭ ಭಾಷೆ.

**ಸುಲಿದ ಬಾಳೆಯ ಹಣ್ಣಿನಂದದಿ**
**ಕಳೆದ ಸಿಗುರಿನ ಕಬ್ಬಿನಂದದಿ**
**ಅಳೆದ ಉಷ್ಣದ ಹಾಲಿನಂದದಿ ಸುಲಭವಾಗಿರ್ಪ**
**ಲಲಿತವಹ ಕನ್ನಡ ನುಡಿಯಲಿ**
**ತಿಳಿದು ತನ್ನಲಿ ತನ್ನ ಮೋಕ್ಷವ**
**ಗಳಿಸಿಕೊಂಡರೆ ಸಾಲದೆ? ಸಂಸ್ಕೃತದಲಿನ್ನೇನು?** ಅಂತ ಒಬ್ಬರು ಹಾಡಿದ್ದಾರೆ. ಭಾಷೆಯನ್ನು ಹೇಗೆ ಉಪಯೋಗಿಸಬೇಕು ಅಂತ ಕಲೀಬೇಕು.
ಅಲ್ಪಪ್ರಾಣ, ಮಹಾಪ್ರಾಣವನ್ನು ಸರಿಯಾಗಿ ಉಚ್ಚರಿಸಲು ಕಲಿಯಬೇಕು.



ಚಿಗುರು ಚಿಲಿ ಪಿಲಿ ...ಮಾಸ ಪತ್ರಿಕೆ
ಚಿಗುರು ಕನ್ನಡ ಪಾಠಶಾಲೆ - ಶಾರ್ಲೆಟ್



## ನನ್ನ ಕ್ಯಾಂಪಿಂಗ್ ಅಡ್ವೆಂಚರ್ : ಪ್ರದ್ಯುಮ್ನ ನರೇಶ್

ನಾನು ಹಾಗು ನನ್ನ ಅಪ್ಪ , ಅಮ್ಮ ಮತ್ತು ಸ್ನೇಹಿತರೊಂದಿಗೆ ಟ್ವಿನ್ ರಿವರ್ಸ್ ಅಲ್ಲಿ ಕ್ಯಾಂಪಿಂಗ್ ಗೆ ಹೋಗಿದ್ದೆವು. ನಾವು ನದಿಯ ದಡದಲ್ಲಿ ಕ್ಯಾಂಪ್ ಸೈಟ್ ಹಾಕಿದ್ದೆವು. ಎಲ್ಲಾ ಅಪ್ಪಂದಿರು ಟೆಂಟ್ಗಳನ್ನ ಹಾಕಿ ಕೊಟ್ಟರು. ನಾವು ಅವರ ಜೊತೆ ಸೇರಿ ನಮ್ಮ ಟೆಂಟ್ ಅನ್ನು ಬಿಲ್ಡ್ ಮಾಡಿದೆವು. ಟೆಂಟ್ ನಲ್ಲಿ ಆಗಲೇ ಮಲಗಲಿಕ್ಕೆ ತುಂಬಾ ಆಸಕ್ತಿ ಇತ್ತು. ಕ್ಯಾಂಪ್ ಸೈಟ್ ನಲ್ಲಿ ಒಂದು ದೊಡ್ಡ ಕ್ಯಾನೋಪಿ ಹಾಕಿದ್ದರು. ಅದೇ ನಮಗೆಲ್ಲ ಕಿಚನ್ ಆಗಿತ್ತು. ಅದರಲ್ಲಿಯೇ ಮನೆಯಿಂದ ತಂದ ಪದಾರ್ಥಗಳೊಂದಿಗೆ ರುಚಿಯಾದ ಅಡುಗೆಯನ್ನು ಮಾಡಿ ನಮಗೆ ತಿನ್ನಲು ಕೊಟ್ಟರು. ನಾವೆಲ್ಲಾ ಅಲ್ಲಿಯೇ ಇದ್ದ ಪಿಕ್ನಿಕ್ ಟೇಬಲ್ ನಲ್ಲಿ ಕುಳಿತು ಊಟ ಮಾಡಿದೆವು. ಮಕ್ಕಳಿಗೆ ಆಡಲು ಚಿಕ್ಕ ಟೆಂಟ್ ಕೂಡ ಹಾಕಿದ್ದರು.

ಸಂಜೆ ನಾವೆಲ್ಲರೂ ಕ್ಯಾನೋಯಿಂಗ್ ಮಾಡಿದೆವು. ನದಿಯಲ್ಲಿ ಸುಮಾರು ೫ ಮೈಲ್ಸ್ ದೋಣಿ ಪ್ರವಾಸ ತುಂಬಾ ರೋಮಾಂಚಕ ಹಾಗು ಅದ್ಭುತವಾಗಿತ್ತು. ಮೊದಲಿಗೆ ಸ್ವಲ್ಪ ಭಯವಾದರೂ ನನಗೆ ತುಂಬಾ ಇಷ್ಟವಾಯಿತು. ಆಗಾಗ ಅಲ್ಲಲ್ಲಿ ಕಲ್ಲು ಬಂಡೆಗಳಿಗೆ ಡಿಕ್ಕಿ ಹೊಡೆದು ಮತ್ತೆ ಮುಂದೆ ಸಾಗಿದೆವು.

ರಾತ್ರಿಯಾದ ನಂತರ ಕ್ಯಾಂಪಿಫೈರ್ ಅಚ್ಚಿದರು. ಕ್ಯಾಂಪ್ ಫೈರ್ ಬಳಿ ನಾವೆಲ್ಲಾ ಕುಳಿತೊಕೊಂಡೆವು. ಆಗ ಕ್ಯಾಂಪ್ ಫೈರ್ ನ ಬೆಂಕಿಯಲ್ಲಿ ಮಾರ್ಷ್ಮೆಲ್ಲೋಸ್ ನ ಸುಟ್ಟು ಚಾಕಲೇಟ್ ಹಾಗು ಬಿಸ್ಕೆಟ್ ಬದಿಯಲ್ಲಿ ಇಟ್ಟು ನಮಗೆ ತಿನ್ನಲು ಕೊಟ್ಟರು. ಈತರ ಮಾಡಿಕೊಟ್ಟು ತಿಂದ ಸ್ಮೋರ್ಸ್ ಬಹಳ ರುಚಿಯಾಗಿತ್ತು. ಯಮ್ಮಿ ಆಗಿತ್ತು. ಇನ್ನು ತಿನ್ನಬೇಕು ಅನ್ನಿಸುತಿತ್ತು.

ಇದರ ಜೊತೆಗೆ ನಮ್ಮ ಕ್ಯಾಂಪ್ ಸೈಟ್ ನ ಬಳಿ ಸ್ವಾತಂತ್ರ ದಿನದ ಪ್ರಯುಕ್ತ ಪಟಾಕಿಗಳನ್ನು ಹಚ್ಚಿದರು. ಅದು ನೋಡಲು ತುಂಬಾ ಚೆನ್ನಾಗಿತ್ತು. ಫೈರ್ ವರ್ಕ್ಸ್ ಮುಗಿದ ನಂತರ ನಮನ್ನೆಲ್ಲ ಫ್ಲಾಶ್ ಲೈಟ್ ಹಿಡಿದುಕೊಂಡು ರೆಸ್ಟ್ ರೂಮಿಗೆ ಕರೆದು ಕೊಂಡು ಹೋದರು. ಹೋಗುವ ದಾರಿಯಲ್ಲಿ ತುಂಬಾ ಕತ್ತಲಾಗಿತ್ತು. ನಾವೆಲ್ಲಾ ಫ್ಲಾಶ್ ಲೈಟ್ ಹಿಡಿದುಕೊಂಡು ಆಡುತ್ತಾ ಓಡಿದೆವು.

ಆಕಾಶದಲ್ಲಿ ಕಾಣುತ್ತಿರುವ ನಕ್ಷತ್ರಗಳನ್ನು ನೋಡುತ್ತಾ ರಾತ್ರಿ ಟೆಂಟ್ ನಲ್ಲಿ ಮಲಗಿದೆವು. ಟೆಂಟ್ ನಲ್ಲಿ ಮಲಗಲು ನನಗೆ ತುಂಬಾ ಭಯವಾಗುತ್ತಿತ್ತು. ಆಗ ನನ್ನ ಅಮ್ಮ ಬಂದು ಒಂದು ಕಥೆಯನ್ನು ಹೇಳಿ ನನ್ನನ್ನು ಮಲಗಿಸಿದಳು. ಬೆಳ್ಳಿಗ್ಗೆ ಎದ್ದ ನಂತರ ತುಂಬಾ ಚಳಿ ಆಗುತ್ತಿತ್ತು. ಎಲ್ಲಲ್ಲಿ ನೋಡಿದರೂ ಬರಿ ಫೋಗ್. ನಮ್ಮ ಕ್ಯಾಂಪ್ ಸೈಟ್ ಫೋಗ್ ನಿಂದ ಮುಚ್ಚಿಹೋಗಿತ್ತು.

ಬಿಸಿ ಬಿಸಿ ತಿಂಡಿಯನ್ನು ಸವಿಯುತ್ತಾ ಫೋಟೋಸ್ ತೆಗೆದು ಕೊಂಡು ಟೆಂಟ್ಸ್ ಪ್ಯಾಕ್ ಮಾಡಿ ಮನೆಗೆ ಹೊರೆಟೆವು. ಅಬ್ಬಾ ಅದೆಷ್ಟು ಬೇಗ ಮುಗಿದು ಹೋಯಿತು ನಮ್ಮ ಕ್ಯಾಂಪಿಂಗ್.

ನಮಗೆಲ್ಲಾ ಈ ಕ್ಯಾಂಪಿಂಗ್ ಅಡ್ವೆಂಚರ್ ತುಂಬಾ ಇಷ್ಟವಾಯಿತು.







# ಚಿಣ್ಣರ ಚಿತ್ರ ಕಲೆ





ಶ್ರಾವ್ಯ ನಾಗೇಶ್




ಸೋಹಾನ್ ನಂದೀಶ್




ಆಧ್ಯ ಅನಿಲ್ ಕುಮಾರ್



ಅಭಿಜ್ಞಾ ನಾಗೇಶ್



**ನಾ ಓದಿದ ಕಥೆ : ಅಭಿಜ್ಞಾ ನಾಗೇಶ್**

## ರಾಧಾಳ ಕನಸು

ಒಂದೂರಿನಲ್ಲಿ ರಾಧಾ ಎನ್ನುವ ಹಾಲು ಮಾರುವವಳಿದ್ದಳು. ಅವಳು ಹಾಲಿನ ಗಡಿಗೆಯನ್ನು ತಲೆಯ ಮೇಲೆ ಹೊತ್ತು ಅಕ್ಕಪಕ್ಕದ ಹಳ್ಳಿಗಳಲ್ಲಿ ಮಾರುತ್ತಿದ್ದಳು. ದಾರಿಯಲ್ಲಿ ಹೋಗುವಾಗಲೆಲ್ಲ ಕನಸು ಕಾಣುತ್ತಿದ್ದಳು. ಒಂದು ದಿನ “ಹಾಲು ಮಾರಿ ಬಂದ ದುಡ್ಡಿಂದ ಕೋಳಿಯ ಮೊಟ್ಟೆಗಳನ್ನು ಕೊಂಡುಕೊಳ್ಳುತ್ತೇನೆ. ಮೊಟ್ಟೆಗಳಿಂದ ಹೊರಬಂದ ಮರಿಗಳು ದೊಡ್ಡದಾದಾಗ ಅದನ್ನು ಮಾರಿ ಹೆಚ್ಚು ಹೆಚ್ಚು ದುಡ್ಡು ಸಂಪಾದಿಸುತ್ತೇನೆ. ಆ ದುಡ್ಡಿಂದ ಒಳ್ಳೆಯ ರೇಷಿಮೆಯ ಸೀರೆಗಳನ್ನು ಕೊಂಡುಕೊಳ್ಳುತ್ತೇನೆ. ಜನರು ನನ್ನ ಶ್ರೀಮಂತಿಕೆಯ ಗುಟ್ಟನ್ನು ತಿಳಿಸಲು ಕೇಳಿದಾಗ ತಲೆಯಾಡಿಸಿ ಇಲ್ಲವೆಂದು ಹೇಳುತ್ತೇನೆ” ಎಂದು ತನ್ನ ಮನಸ್ಸಿನಲ್ಲಿ ಹೇಳಿಕೊಂಡಳು. ಅವಳು ಇಲ್ಲ ಅನ್ನುತ್ತೇನೆ ಎಂದು ಕನಸು ಕಂಡಾಗ ನಿಜವಾಗಲೂ ತಲೆಯಾಡಿಸಿದಳು. ತಲೆಯ ಮೇಲಿದ್ದ ಹಾಲಿನ ಗಡಿಗೆ ನೆಲಕ್ಕೆ ಬಿದ್ದು ಒಡೆದು ಹಾಲು ಚೆಲ್ಲಿತು. ಶ್ರೀಮಂತೆಯಾಗುವ ಕನಸು ಕನಸಾಗಿ ಉಳಿಯಿತು.

**ನೀತಿ: ಗಾಳಿಯಲ್ಲಿ ಕಟ್ಟುವ ಕೋಟೆಗಳು ನಿಲ್ಲುವುದಿಲ್ಲ.**



**ಜುಲೈ ನಲ್ಲಿ ಜನಿಸಿದ ಪ್ರಸಿದ್ಧ ಕನ್ನಡಿಗರು : ನಮಿತ ಪಂಡಿತ್**

ಗಣೇಶ್ - ಜುಲೈ, 02, 1977
ರಜನಿ - ಜುಲೈ, 27, 1964
ಕಲ್ಪನಾ - ಜುಲೈ 08, 1943.
ಪಂಕಜ್ ಅಡ್ವಾಣಿ - ಜುಲೈ 24, 1985
ಶಿವರಾಜ್ ಕುಮಾರ್ - ಜುಲೈ 12, 1962
ಅಭಿಜೀತ್ - ಜುಲೈ 30, 1963
ಅನಂತ್ ಕುಮಾರ್ - ಜುಲೈ 22, 1959
ಮುಮ್ಮಡಿ ಕೃಷ್ಣರಾಜ ಒಡೆಯರ್ - ಜುಲೈ 14, 1794
ಜಯಚಮರಾಜ ಒಡೆಯರ್ ಬಹದ್ದೂರ್- ಜುಲೈ 18, 1919
ಎಂ.ಎಸ್. ಸತ್ಯು - ಜುಲೈ 06, 1930
ಎನ್. ವೆಂಕಟಚಲ - ಜುಲೈ 03, 1930
ಟಿ.ಪಿ. ಕೈಲಾಸಮ್ - ಜುಲೈ 06, 1930



## ನಾ ಕಂಡ ಸಿನಿಮಾ " ಮೈತ್ರಿ " : ಅದಿತ್ ಕುಮಾರ್




ಮೈತ್ರಿ ಚಲನಚಿತ್ರ ದಲ್ಲಿ ಪುನೀತ್ ರಾಜಕುಮಾರ್, ಮೋಹನ್ ಲಾಲ್ ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಈ ಚಲನಚಿತ್ರವು ಸಿದ್ರಾಮ ಎಂಬ ಸ್ಲಂ ಹುಡುಗನ ಕಥೆ.

ಸಿದ್ರಾಮ ತುಂಬಾ ಇಂಟ್ಲಿಜೆಂಟ್ ಹುಡುಗ. ಅವನ ತಾಯಿ ಅಗರಬತ್ತಿ ಕಾರ್ಖಾನೆಯಲ್ಲಿ ಕೆಲಸ ಮಾಡಿ ಜೀವನ ನಡೆಸುತ್ತಿರುತ್ತಾರೆ. ಒಂದು ದಿನ ಕುಚೇಸ್ಟೆಯಿಂದ ಸಿದ್ರಾಮನನ್ನು ಪೋಲಿಸ್ರು ಬಂಧಿಸುತ್ತಾರೆ. ಅವನ ತಾಯಿ ಗೂಳಿ ಪ್ರತಾಪನ ಸಹಾಯ ಕೇಳುತ್ತಾಳೆ. ಗೂಳಿ ಪ್ರತಾಪ ಮಕ್ಕಳನ್ನು ಹಣಕ್ಕಾಗಿ ಬೇರೆ ದೇಶಕ್ಕೆ ಮಾರುವವನು. ಅವನ ಕಣ್ಣು ಸಿದ್ರಾಮ ಮತ್ತು ಅವನ ತಾಯಿಯ ಮೇಲೆ ಇರುತ್ತದೆ. ಸಿದ್ರಾಮ, ಪುನೀತ್ ರಾಜಕುಮಾರ್ ನ ಬಹಳ ದೊಡ್ಡ ಅಭಿಮಾನಿ ಆಗಿರುತ್ತಾನೆ. ಸ್ಕೂಲ್ ಬಂಕ್ ಮಾಡಿ ಪುನೀತ್ ರಾಜ್ ಕುಮಾರ್ ಮೂವಿ ಶೂಟಿಂಗ್ ನೋಡಲು ಹೋಗುತ್ತಾನೆ. ಶೂಟಿಂಗ್ ವೇಳೆ ಸಿದ್ರಾಮನಿಗೆ ಪುನೀತ್ ರಾಜಕುಮಾರ್ ಜೊತೆ ಮಾತಾಡುವ ಅವಕಾಶ ಸಿಗುತ್ತದೆ.ನಂತರ ಸಿದ್ರಾಮನನ್ನು ಜುವಿನೈಲ್ ಜೈಲಿನಲ್ಲಿ ನೋಡುತ್ತೇವೆ. ಅವನ ವಾರ್ಡನ್ ತುಂಬಾ ಸ್ಟ್ರಿಕ್ಟ್ . ಜೈಲಿನಲ್ಲಿ ಇದ್ದುಕೊಂಡು ಸಿದ್ರಾಮ "ಕರುನಾಡ ಕೋಟ್ಯಾಧಿಪತಿ" ಗೆ ಆಯ್ಕೆ ಆಗುತ್ತಾನೆ. ಈ ಕಾರ್ಯಕ್ರಮದ ನಿರೂಪಕ ಪುನೀತ್ ರಾಜಕುಮಾರ್ ಆಗಿರುತ್ತಾನೆ. ಸಿದ್ರಾಮ ಒಂದು ಕೋಟಿ ಗೆಲ್ಲಲು ಒಂದು ಹೆಜ್ಜೆ ಹಿಂದಿರುತ್ತಾನೆ.ಆ ಸಮಯದಲ್ಲಿ ಡಿ.ಆರ್.ಡಿ.ಓ. ಸೈಂಟಿಸ್ಟ್ ಮಹದೇವ ಗೋಡ್ಕೆ. ಪುನೀತ್ ರಾಜಕುಮಾರನ್ನು ಭೇಟಿಯಾಗಿ ಈ ಕಾರ್ಯಕ್ರಮವನ್ನು ನೀವು ಇಲ್ಲಿಗೆ ನಿಲ್ಲಿಸಬೇಕು. ಸಿದ್ರಾಮ ನನ್ನ ಮಗನನ್ನು ಕೊಲೆ ಮಾಡಿರುದಾಗಿ ಹೇಳುತ್ತಾನೆ. ಸಿದ್ರಾಮ ಒಂದು ಕೋಟಿ ಗೆಲ್ಲುತ್ತಾನಾ? ಕೊಲೆ ಮಾಡಿದವರು ಯಾರು? ಎಲ್ಲವನ್ನು ತಿಳಿದು ಕೊಳ್ಳಲು ನೀವು ಚಲನಚಿತ್ರವನ್ನು ವೀಕ್ಷಿಸಿ.

## ನುಡಿಮುತ್ತು :

೧.ಸೋಲೆಂಬ ರೋಗಕ್ಕೆ ಆತ್ಮವಿಶ್ವಾಸ ಮತ್ತು ಕಠಿಣ ಪರಿಶ್ರಮವೇ ದೊಡ್ಡ ಮದ್ದು. ಇದು ಯಾರಲ್ಲಿರುತ್ತದೆಯೋ ಅವರಿಗೆ ಯಶಸ್ಸು ಕಟ್ಟಿಟ್ಟಬುತ್ತಿ.

೨. ಅರಿವಿನ ಅತ್ಯಂತ ದೊಡ್ಡ ಶತ್ರು ಜ್ಞಾನದ ನಿರಾಕರಣೆಯಲ್ಲ, ಅರಿವಿದೆ ಎಂಬ ಭ್ರಮೆ.

## ಜೋಕ್ಸ್ : ಆರುಶ್ ಯೆಲಿಮೆಲಿ

ಗುಂಡ: ಅಜ್ಜಿ ನಿದ್ದೆ ಬರ್ತಿಲ್ಲ, TV ನೋಡ್ತಾ?
ಅಜ್ಜಿ : ನನ್ನ ಜೊತೆ ಮಾತಾಡುವಿಯಂತೆ ಬಾರೊ ಗುಂಡ
ಗುಂಡ : ಅಜ್ಜಿ ನಾವು ಯಾವಾಗಲೂ 6 ಜನನೇ ಇರ್ತಿವಾ?
ನೀನು, ಅಮ್ಮ, ಅಪ್ಪ, ಅಕ್ಕ, ನಾನು ಮತ್ತು ಬೆಕ್ಕು
ಅಜ್ಜಿ : ಇಲ್ಲ ನಮ್ಮನೆಗೆ ಒಂದು ನಾಯಿ ಕೂಡ ತರಬೇಕು ಅಂತಿದ್ದೀವಲ್ಲ, ಅದು ಬಂದ ಮೇಲೆ 7 ಆಗ್ತೀವಿ.
ಗುಂಡ : ಆದರೆ ನಾಯಿ ಬೆಕ್ಕನ್ನ ತಿಂದುಬಿಡುತ್ತೆ. ಕೊನೆಗೆ ಆರೇ ಉಳ್ಕೋತೀವಿ
ಅಜ್ಜಿ : ನಿನಗೆ ಮದ್ವೆ ಆಗುತ್ತಲ್ಲ ಆಗ ನಿನ್ನ ಹೆಂಡ್ತಿ ಬರ್ತಳೆ ಆಗ 7 ಜನ ಆಗ್ತೀವಿ
ಗುಂಡ : ಆದ್ರೆ ಅಕ್ಕ ಮದ್ವೆ ಆಗಿ ಹೋಗ್ತಾಳಲ್ಲ ಅದಕ್ಕೆ 6 ಜನನೇ ಉಳ್ಕೋತೀವಿ
ಅಜ್ಜಿ : ಇಲ್ಲಪ್ಪ ನಿನಗೆ ಪಾಪು ಆಗುತ್ತಲ್ವ ಅವಾಗ ನಾವು 7 ಜನ ಆಗ್ತೀವಿ
ಗುಂಡ : ಅಷ್ಟೊತ್ತಿಗೆ ನೀನು ಸತ್ತೋಗ್ತ್ಯಲ್ಲ ನಾವು 6 ಜನನೇ ಉಳ್ಕೋತೀವಿ
ಅಜ್ಜಿ : ಅಯ್ಯೋ ಕೋತಿ ಮುಂಡೇದೆ ಹೋಗೊ TV ನೋಡು

**ಸುಭಾಷಿತ : ಬೇರೆಯವರ ಬುದ್ಧಿವಾದಕ್ಕೆ ಕಿವಿಕೊಡುವ ಸಮೃದ್ಧಿ ಇದ್ದರೆ ನಾವು ನಮ್ಮ ಜೀವನದಲ್ಲಿನ ಎಷ್ಟೋ ಅನಾಹುತಗಳನ್ನು ತಪ್ಪಿಸಬಹುದು.**



## ಗಾದೆಗಳು: "ಬೆಕ್ಕಿಗೆ ಆಟ ಇಲಿಗೆ ಪ್ರಾಣ ಸಂಕಟ"

-ಇಂದಿರಾ ನಾಗೇಶ್

ಬಲಿಶಾಲಿಗಳು ಶ್ರೀಮಂತರ ಹುಡುಗಾಟ ದುರ್ಬಲರಿಗೆ, ಕೆಳವರ್ಗದವರಿಗೆ ಬಡವರಿಗೆ ಸಂಕಟವನ್ನು ಉಂಟುಮಾಡುತ್ತದೆ ಎಂಬ ಅರ್ಥವನ್ನು ಈ ಗಾದೆ ನೀಡುತ್ತದೆ.
ಇಲ್ಲಿ ಬೆಕ್ಕು ಹಾಗು ಇಲಿ ಎಂಬ ಪ್ರಾಣಿಗಳ ಹೆಸರನ್ನು ಬಳಸಿದ್ದರು, ಇವುಗಳ ಹಾಗೆ ವರ್ತಿಸುವ ಮನುಷ್ಯರಿಗೆ ಅನ್ವಯಿಸುತ್ತದೆ. ಬೆಕ್ಕು ಇಲಿಯನ್ನು ಬೇಟೆಯಾಡಿದ ತಕ್ಷಣ ತಿನ್ನದೆ ಅದಕ್ಕೆ ಹಿಂಸೆ ಕೊಟ್ಟು ಚೆಲ್ಲಾಟವಾಡುತ್ತದೆ. ಅದೇ ರೀತಿಯಲ್ಲಿ ಕೆಲವು ಮನುಷ್ಯರಿಗೆ ಇದೇ ಬುದ್ದಿ ಇರುತ್ತದೆ. ಇವರು ಇತರರು ಕಷ್ಟಪಡುವುದನ್ನು ಕಂಡು ಸಂತೋಷಪಡುತ್ತಾರೆ. ತಮಗೆ ಆಗದವರಿಗೆ ಏನಾದರೂ ಆಪತ್ತು ಸಂಭವಿಸಿದರೆ ಅದನ್ನು ಕಂಡು ಹಾಲು ಕುಡಿದಷ್ಟು ಸಂತೋಷವಾಗುತ್ತದೆ. ಹೀಗೆ ಅನೇಕರು ಇತರರಿಗೆ ಕಷ್ಟಕೊಟ್ಟು ಚೆಲ್ಲಾಟವಾಡುತ್ತಾರೆ. .

## ಪದ ಹುಡುಕೋಣ – ವಿವಿಧ ಭಾರತೀಯ ಭಾಷೆಗಳು

| | | | | | | | | | | | |
|---|---|---|---|---|---|---|---|---|---|---|---|
| ಎ | ಎ | ಧ | ಭಾ | ಷೆ | ಬಂ | ಭಾ | ರ | ತೀ | ಯ | ಉ | ರ್ದು |
| ಸಾ | ಕು | ಕ | ಪ್ರಾ | ಣಿ | ಗಾ | ಗ | ಳು | ಗು | ಗೋ | ಮಾ | ಳ |
| ಸ | ನ್ನಿ | ನ್ನ | ವಾ | ತ | ಳ | ರೋ | ಗ | ಜ | ಆ | ರೋ | ಗ್ಯ |
| ಮ | ನೆ | ಡ | ರಾ | ಜಾ | ಸ್ಥಾ | ನಿ | ಖ | ರಾ | ಟ್ಟ | ಒ | ಡ |
| ಕಿ | ಟ | ಕಿ | ತ | ಮಿ | ಳು | ರ | ಣ | ತಿ | ರಂ | ರಿ | ಗ |
| ರು | ದ್ರ | ಭೂ | ಮಿ | ಗೇ | ಹ | ತೆ | ಲು | ಗು | ಪು | ಯ | ಅ |
| ಅ | ಸ್ಸಾ | ಮಿ | ಇ | ಸಂ | ಸ್ಕೃ | ತ | ಈ | ಟಿ | ಪಾ | ಲಿ | ಏ |
| ಎ | ಲಿ | ಜ | ಬೆ | ತ್ | ಬಾಂ | ಗ್ಲಾ | ನು | ಮ | ಲ | ಯಾ | ಳಂ |
| ಕೀ | ಮ | ಜ | ವ | ರೇ | ಕೊಂ | ಬು | ಡಿ | ಯೋ | ಗ್ರಾ | ಚಾ | ರ |
| ಬ | ಣಿ | ಬ | ಳ | ಕ | ಕ | ಮೂ | ರು | ಮ | ಹಿ | ಳೆ | ಯ |
| ಶ್ | ಪು | ಪಂ | ಜಾ | ಬಿ | ಣಿ | ಟ | ಕ್ಕಿ | ಗ | ರಾ | ತು | ಳು |
| ಪ | ರಿ | ಪೂ | ಜ್ಯ | ಭಾ | ವ | ನೆ | ಪ್ರಾ | ಕ್ರಾಂ | ತಿ | ಠಿ | ವೀ |
| ಸಂ | ಗೊ | ಳ್ಳಿ | ಹಿಂ | ರಾ | ಯ | ಣ್ಣ | ಕೃ | ಊ | ಧಿ | ಝಾ | ವ |
| ಮ | ಟ | ಲ | ದಿ | ಎ | ವ | ರೆ | ತ | ಸ | ಸಿಂ | ಸಂ | ಘ |

| | | | |
|---|---|---|---|
| ಕನ್ನಡ | ಉರ್ದು | ಸಂಸ್ಕೃತ | ತಮಿಳು |
| ಒರಿಯ | ಮರಾಠಿ | ತೆಲುಗು | ಅಸ್ಸಾಮಿ |
| ಸಿಂಧಿ | ಮಲಯಾಳಂ | ಪ್ರಾಕೃತ | ಹಿಂದಿ |
| ಕೊಂಕಣಿ | ಪಂಜಾಬಿ | ರಾಜಾಸ್ಥಾನಿ | ತುಳು |
| ಬಂಗಾಳಿ | ಪಾಲಿ | ಗುಜರಾತಿ | ಮಣಿಪುರಿ |

ಕೃಪೆ : ಮಕ್ಕಳ ಕ್ವಿಜ್ ಪುಸ್ತಕ –ಎನ್. ಪ್ರಭಾ

## ಚಿತ್ರ ಶೀರ್ಷಿಕೆ : ಮಹಾಂತೇಶ್ ಬ್ಯಾಡಗಿ



ದೋಣಿ ಸಾಗಲಿ... ಮುಂದೆ ಹೋಗಲಿ ...!

## ಫಿಫಾ ವಿಶ್ವಕಪ್ ಫೈನಲ್ಸ್- 2018

ಕ್ರೀಡೆ : ಮೇಘನ ಪಂಡಿತ್



ಕ್ರೊಯೇಷಿಯಾ vs. ಫ್ರಾನ್ಸ್, ಎರಡು ತಂಡಗಳು ಫೈನಲ್ಸ್ ಆಟಕ್ಕೆ ಸಿದ್ಧರಾಗಿದ್ದರು. ಪ್ರೇಕ್ಷಕರು ಆಟಕ್ಕೆ ಸಿದ್ಧರಾಗಿದ್ದರು. ನಾನು ಕ್ರೊಯೇಷಿಯಾದೊಂದಿಗೆ ಇದ್ದೇ. ಎರಡೂ ತಂಡಗಳು ತಮ್ಮ ರಾಷ್ಟ್ರೀಯ ಗೀತೆಗಳನ್ನು ಹಾಡಿ, ಆಟವನ್ನು ಪ್ರಾರಂಭಿಸಿತು. ಮನೆಯಲ್ಲಿ ನನ್ನ ಸ್ನೇಹಿತರು ಹರ್ಷೋದ್ಗಾರದಲ್ಲಿ ಕೂಗುತ್ತಿದ್ದರು. ಫ್ರಾನ್ಸ್ ಮೊದಲ 18 ನಿಮಿಷಗಳಲ್ಲಿ ಗೋಲು ಹೊಡೆದಿದೆ, ಆದರೆ ನಾವು ಕ್ರೊಯೇಷಿಯಾದ ಅಭಿಮಾನಿಗಳು ಇನ್ನೂ ಭರವಸೆ ಕಳೆದುಕೊಳ್ಳಲಿಲ್ಲ. ನಮ್ಮ ಸ್ಥಳದಲ್ಲಿದ್ದ ಒಂದು ಗೆಳತಿ ಫ್ರೆಂಚ್ ಅಭಿಮಾನಿಯಾಗಿದ್ದು ಎಲ್ಲರೂ ಕ್ರೊಯೇಷಿಯಾದ ಅಭಿಮಾನಿಯಾಗಿದ್ದರು.

10 ನಿಮಿಷಗಳ ನಂತರ, 28 ನಿಮಿಷಗಳಲ್ಲಿ, ಕ್ರೊಯೇಷಿಯಾ ತಮ್ಮ ಮೊದಲ ಗೋಲನ್ನು ಹೊಡೆದರು. ಈ ಹಂತದಲ್ಲಿ, ಎರಡೂ ತಂಡಗಳ ಅಂಕಗಳು ಒಂದೇ ಆಗಿವೆ. ಕೆಲವರು ಇನ್ನೂ ಕ್ರೊಯೇಷಿಯಾದಲ್ಲಿ ನಂಬಿಕೆಯನ್ನು ಹೊಂದಿದ್ದರು ಏಕೆಂದರೆ ಅವರು ಗೋಲು ಗಳಿಸಲು ಕೇವಲ 10 ನಿಮಿಷಗಳು ತೆಗೆದುಕೊಂಡರು. ಸುಮಾರು 10 ನಿಮಿಷಗಳ ನಂತರ, ಫ್ರಾನ್ಸ್ ಆಟಗಾರರಲ್ಲಿ ಒಬ್ಬರು ಚೆಂಡನ್ನು ಕೈಯಿಂದ ಮುಟ್ಟಿದರು. ಅವರು ಹಳದಿ ಕಾರ್ಡ್ ಪಡೆದರು.

ಕೆಲವು ವಿಚಿತ್ರ ಕಾರಣಕ್ಕಾಗಿ ಫ್ರಾನ್ಸ್ ಪೆನಾಲ್ಟಿ ಕಿಕ್ ಪಡೆದರು, ಪೆನಾಲ್ಟಿ ಕಿಕ್ : ಆಟಗಾರನು ಗೋಲುಗೆ ಕಿಕ್ ಮಾಡಲು ಬಂದಾಗ ಅದು ಒಬ್ಬ ಆಟಗಾರ ಮತ್ತು ಇತರ ತಂಡದ ಗೋಲೀ ನಡುವೆ ಮುಖಾಮುಖಿಯಾಗಿದೆ. ಫ್ರೆಂಚ್ ತಂಡದ ಪರವಾಗಿ ಆಡುವ ಆಂಟೊಯಿನ್ ಗ್ರೀಜ್ಮನ್ ಚೆಂಡನ್ನು ಪ್ರಾರಂಭಿಸಿದರು ಮತ್ತು ಅದು ನೇರವಾಗಿ ಗೋಲುಗೆ ಹೋಯಿತು. ಪೆನಾಲ್ಟಿ ಕಿಕ್ಗಳಿಗಾಗಿ ಫ್ರಾನ್ಸ್ ಅತ್ಯುತ್ತಮ ತಂಡಗಳಲ್ಲಿ ಒಂದಾಗಿದೆ. ಇದು ಕ್ರೊಯೇಷಿಯಾದ ಅಭಿಮಾನಿಗಳಿಗೆ ದುರಂತವಾಗಿತ್ತು ಆದರೆ ಫ್ರೆಂಚ್ ಅಭಿಮಾನಿಗಳಿಗೆ ಒಂದು ದೊಡ್ಡ ಸಾಧ್ಯತೆ. ಫ್ರಾನ್ಸ್ ಇದನ್ನು ಮುಂದುವರಿಸಿದರೆ ಅವರು ಗೆಲ್ಲುತ್ತಾರೆ.

ಹಳದಿ ಕಾರ್ಡುಗಳು, ಫೌಲ್ಗಳು, ಸ್ವಾಪ್ಸ್ ಮತ್ತು ಗೋಲುಗಳ ಗುಂಪಿನ ನಂತರ ಫ್ರಾನ್ಸ್ ಕ್ರೊಯೇಷಿಯಾ 4-2 ಅನ್ನು ಸೋಲಿಸಿತು. ಇದು ಬಹಳ ಕಠಿಣ ಆದರೆ ಉತ್ತಮ ಆಟವಾಗಿತ್ತು. ಫ್ರಾನ್ಸ್ ಗೋಲೀಯನ್ನು ಗೊಂದಲಕ್ಕೊಳಗಾದ ಗೋಲು ಎಸೆಯುವ ಮೂಲಕ ಮಾರಿಯೋ ಮಂಡ್ಜುಕಿಕ್ ಚೆಂಡನ್ನು ನೇರವಾಗಿ ಮುಂದೂಡಿದಾಗ ನನ್ನ ನೆಚ್ಚಿನ ಗೋಲು ಆಗಿದೆ. ಗೋಲಿ ಅದನ್ನು ಕಿಕ್ ಮಾಡಲು ಪ್ರಯತ್ನಿಸಿದನು, ಆದರೆ ಅವನು ಅದನ್ನು ಮಾರಿಯೋ ಗೆ ಬಲವಾಗಿ ಒದೆಯುತ್ತಾ ಅದನ್ನು ಗೋಲುಗೆ ತಳ್ಳಿದನು. ಅದು ಅಮೋಘವಾಗಿತ್ತು! ಒಟ್ಟಾರೆಯಾಗಿ, ನಾವು ಕ್ರೊಯೇಷಿಯಾದ ಅಭಿಮಾನಿಗಳು ಸಾಕಷ್ಟು ದುಃಖ ಪಟ್ಟರು. ಮುಂದಿನ ಬಾರಿ ಮತ್ತೆ ನೋಡೋಣ ಕ್ರೊಯೇಷಿಯಾ!

### ಪಾಕ ಶಾಲೆ : ಪ್ರಮಿತಿ ಉಪಾಧ್ಯ
### ಕ್ಯಾಪ್ಸಿಕಂ ಚಿತ್ರಾನ್ನ


ಮೊದಲು ಅನ್ನವನ್ನು ಮಾಡಿಕೊಳ್ಳಬೇಕು.
ಒಂದು ಬಾಣಲೆಯಲ್ಲಿ ಎಣ್ಣೆ ಹಾಕಿ ಅದಕ್ಕೆ ಸಾಸಿವೆ ಹಾಕಿ ನಂತರ ಒಂದೊಂದಾಗಿ ಕಡಲೆಬೀಜ, ಉದ್ದಿನಬೇಳೆ, ಕಡಲೆ ಬೇಳೆ ಹಾಕಿ ಹುರಿಯಿರಿ. 2 ಕೆಂಪು ಮೆಣಸಿನಕಾಯಿ ಕರಿಬೇವು, ಹಸಿಮೆಣಸಿನಕಾಯಿ ಹಾಕಿ ಬಾಡಿಸಿದ ನಂತರ ಹೆಚ್ಚಿದ ಕ್ಯಾಪ್ಸಿಕಂ ಹಾಕಿ ಬಾಡಿಸಿ, ಅದಕ್ಕೆ ಚಿಟಿಕೆ ಅರಿಶಿನ ಹಾಕಿ ಬೆರೆಸಿ ಅನಂತರ ಅನ್ನ ಹಾಕಿ ರುಚಿಗೆ ತಕ್ಕಷ್ಟು ಉಪ್ಪು ಹಾಕಿ ಮೇಲೆ ಕೊತ್ತಂಬರಿ ಸೊಪ್ಪು ಹಾಗೂ ತೆಂಗಿನಕಾಯಿ ತುರಿ ಹಾಗೂ ನಿಂಬೆ ಹಣ್ಣಿನ ರಸ ಹಾಕಿ ಬೆರೆಸಿ. ಈಗ ರುಚಿಯಾದ ಚಿತ್ರಾನ್ನ ಸವಿಯಲು ರೆಡಿ.

### ಮಂಕುತಿಮ್ಮನ ಕಗ್ಗ

ಒಗಟೆಯೇನೀ ಸೃಷ್ಟಿ? ಬಾಳಿನರ್ಥವೇನು ?
ಬಗೆದು ಬಿಡಿಸುವರಾರು ಸೋಜಿಗವನಿದನು ?
ಜಗವ ನಿರವಿಸಿದ ಕೈಯೊಂದಾದೊಡೇಕಿಂತು
ಬಗೆ ಬಗೆಯ ಜೀವಗತಿ ? – ಮಂಕುತಿಮ್ಮ ॥ ೬॥

ಬದುಕಿಗಾರ್ ನಾಯಕರು, ಏಕನೋ ಅನೇಕರೋ?
ವಿಧಿಯೋ ಪೌರುಷವೋ ಧರುಮವೋ ಅಂಧಬಲವೋ?
ಕುದುರುವುದೆಂತು ಈಯವ್ಯವಸ್ಥೆಯ ಪಾಡು?
ಅದಿಗುದಿಯೆ ಗತಿಯೇನೋ? – ಮಂಕುತಿಮ್ಮ ॥ ೭॥





## ಪತ್ರಮಾಲೆ: ಶ್ರೀ ಬಿದರಹಳ್ಳಿ ನರಸಿಂಹಮೂರ್ತಿ

**ಪತ್ರ 1**

ಪ್ರೀತಿಯ ಪುಟಾಣಿಗಳೆ,

**ಚಿಗುರು ಚಿಲಿಪಿಲಿ** ವಿದ್ಯುನ್ಮಾನ ಮಾಸಪತ್ರಿಕೆ ತುಂಬಚೆನ್ನಾಗಿ ಬರ್ತಾಯಿದೆ. ಸಂಪಾದಕಿ ಶ್ರೀಮತಿ ರಜನಿ ಮಹೇಶ್ ಕನ್ನಡಮಕ್ಕಳಿಗೆ ಉತ್ಸಾಹ ತುಂಬ್ತಾಯಿದಾರೆ. ದಿನದಿನವೂ ಬೆಳೆಯೊ ಪುಟ್ಟಮನಸುಗಳಿಗೆ ಸೃಜನಾತ್ಮಕ(ಕ್ರಿಯೇಟಿವ್) ಉತ್ತೇಜನ(ಎನ್‌ಕರೇಜ್‌ಮೆಂಟ್) ನೀಡಲು ಕಷ್ಟಪಡ್ತಾಯಿದಾರೆ. ಈ ಪತ್ರಿಕೆಯ ಅಕ್ಷರಸಾಹಸದಲ್ಲಿ ನಾನೂ ಸಹಭಾಗಿಯಾದರೆ ಒಳ್ಳೇದು ಅನಿಸ್ತು. ನಿಮ್ಮ ಪರಿಚಯಲಾಭ ನನಗಾಗತ್ತೆ. ಈ ಬಿಳಿಕೂದಲ ಅಜ್ಜನ ಓದು ಮತ್ತು ಅನುಭವದ ಸರಕು ನೀವೂ ಸ್ವಲ್ಪ ಹಂಚಿಕೋಬಹುದು ಅನ್ನಿಸಿತು. ಹೀಗಾಗಿ ನಿಮಗಾಗಿ ಪ್ರಾರಂಭಿಸುತ್ತಿರುವೆ ಈ ಪತ್ರಮಾಲೆ. ನಿಮ್ಮ ಪ್ರತಿಕ್ರಿಯೆ(ರೆಸ್‌ಪಾನ್ಸ್) ನಿರೀಕ್ಷಿಸುವೆ.

ಮಕ್ಕಳ ಪತ್ರಿಕೆಗಳಲ್ಲಿ ಮೊದಮೊದಲು ಬರಿ ದೊಡ್ಡವರೆ ಮಕ್ಕಳಿಗಾಗಿ ಬರೆಯುವ ವಾಡಿಕೆಯಿತ್ತು. ಕ್ರಮೇಣ ಮಕ್ಕಳೆ ಬರೆದ ಕಿರುಲೇಖನ, ಚಿತ್ರಗಳೂ ಪ್ರಕಟವಾಗತೊಡಗಿದವು. ಮಕ್ಕಳ ಬರೆವಣಿಗೆಯೆ ಎಷ್ಟೋಸಾರಿ ದೊಡ್ಡವರ ಬರೆವಣಿಗೆಗಿಂತ ಹೆಚ್ಚು ಹೃದಯಸ್ಪರ್ಶಿ ಆಗಿರುತ್ತದೆ. ಮಕ್ಕಳೂ ದೊಡ್ಡವರಂತೆ ಗಂಭೀರವಾಗಿ ಚಿಂತಿಸುವುದುಂಟು. ದೊಡ್ಡವರೂ ಮುಗ್ಧಮಕ್ಕಳಂತೆ ಓದುವ ಆಟದಲ್ಲಿ ಮುಳುಗುವುದುಂಟು ಅಲ್ಲವೆ? ಆದರೆ ಈಗೀಗ ಕೆಲವು ಪತ್ರಿಕೆಗಳು ಬರಿ ಮಕ್ಕಳ ಬರೆವಣಿಗೆಗೆ ಮೀಸಲಾಗಿವೆ. ಇನ್ನುಕೆಲವು ಮಕ್ಕಳಿಗೆಂದು ದೊಡ್ಡವರು ಬರೆವ ಲೇಖನ ಕತೆ ಕವಿತೆ ನಾಟಕಗಳಿಗೆ ಪ್ರಾಶಸ್ತ್ಯ(ಇಂಪಾರ್ಟೆನ್ಸ್)ನೀಡುತ್ತವೆ. ಎಲ್ಲ ಸಮಾಜಗಳಲ್ಲೂ ಹೆಣ್ಣುಮಕ್ಕಳು ಗಂಡುಮಕ್ಕಳು ವಯಸ್ಕರು ಮುದುಕಿ\ಕರು ನಾನಾಬಗೆ ಸಂಕಷ್ಟಗಳನ್ನು ಧೀರೋದಾತ್ತವಾಗಿ ಎದುರಿಸುತ್ತಿರುವವರು ಎಲ್ಲರೂ ಒಟ್ಟಾಗಿಜೀವಿಸುತ್ತ ಜಗತ್ತನ್ನು ಮುನ್ನಡೆಸುತ್ತಿಲ್ಲವೆ? ಅಂದಮೇಲೆ ಅಪರೂಪದ ಬಾಲಪ್ರತಿಭೆ(ಪ್ರಾಡಿಜಿ) ಜೊತೆಗೆ ಮಕ್ಕಳ ಮನೋಲೋಕದಾಳಕ್ಕೆ ಇಳಿಯಬಲ್ಲ ವಯಸ್ಕರು ಮುದುಕರು ಎಲ್ಲರ ಕಲ್ಪನೆ ಭಾವನೆ ಚಿಂತನೆಗಳಿಗೆ ಮುಕ್ತ ಅವಕಾಶವೀಯುವುದು ಸೂಕ್ತವಲ್ಲವೆ? ಅಂಥ ಪ್ರಯತ್ನಮಾಡುತ್ತ ಮಕ್ಕಳ ಭಾವಲೋಕಕ್ಕೆ ಹತ್ತಿರವಾಗುತ್ತಿಲ್ಲವೆ ಈ ಪತ್ರಿಕೆ?

**ಚಿಗುರು ಚಿಲಿಪಿಲಿ** ಬಳಗಕ್ಕಾಗಿ ಬರೆದ ಈ ಮೊದಲಪತ್ರದಲ್ಲಿ ಒಂದು ಚಿಂತನೆ ತುಣುಕು: ಒಬ್ಬ ಸೂಫಿತಾತ ಹೇಳಿದಾನಂತೆ– ದೇವರು ಖನಿಜದಲ್ಲಿ ಮಲಗಿರ್‍ತಾನೆ; ಹಣ್ಣುತರಕಾರಿಯಲ್ಲಿ ಕಣ್ಣುಬಿಡ್ತಾನೆ; ಪ್ರಾಣಿಯಾಗಿ ಅಡ್ಡಾಡ್ತಾನೆ; ಕಡೆಗೆ ಮನುಷ್ಯನಾಗಿ ಚಿಂತನೆಮಾಡ್ತಾನೆ ಅಂತ. ಅಮೀಬದಿಂದ ಆರಂಭವಾಗುವ ಡಾರ್ವಿನ್‌ನ ಜೀವವಿಕಾಸವಾದ ಏನನ್ನುತ್ತದೆ ಹೇಳಿ? ನಾಕುಕಾಲಿನ ಮಂಗ ಮರದಿಂದ ಕೆಳಗೆಹಾರಿ ಎರಡು ಮುಂಗಾಲನ್ನೆ ಕೈಗಳನ್ನಾಗಿಸಿಕೊಂಡು ಮನುಷ್ಯನಾದ ಅನ್ನುತ್ತದೆ ಅಲ್ಲವ? ಅದಕ್ಕಿಂತ ಭಿನ್ನವಾಗಿದೆಯಲ್ಲವೆ ಈ ಸೂಫಿಚಿಂತನೆ? ಡಾರ್ವಿನ್‌ನ ಚಾರಿತ್ರಿಕ ವೈಜ್ಞಾನಿಕ ಪರಿಕಲ್ಪನೆ(ಕಾನ್ಸೆಪ್ಟ್) ಬೌದ್ಧಿಕ ಅನುಭವವಾದರೆ, ಸೂಫಿತಾತನ ಪರಿಕಲ್ಪನೆ ವಿಶ್ವಾತ್ಮಕ(ಕಾಸ್ಮಿಕ್) ಅನುಭಾವ(ಮಿಸ್ಟಿಸಿಸಂ)ದ ಸ್ವರೂಪದ್ದು. ಜಡವಸ್ತುಗಳಲ್ಲಿ ಮತ್ತು ಜೀವಿಗಳಲ್ಲಿರುವ ದೇವಕಣವೆ(ಡಿವೈನ್\ ಗಾಡ್ ಪಾರ್ಟಿಕಲ್) ಮನುಷ್ಯನಾಗಿ ಅವತರಿಸಿತು ಅನ್ನೋದು ಸುಂದರ ಪರಿಕಲ್ಪನೆಯಲ್ಲವೆ?!...ಆದರೆ ಇದೆಲ್ಲ ಫಕ್ಕನೆ ಈಗಿಂದೀಗಲೆ ಅರ್ಥವಾಗಿಬಿಡಬೇಕು ಎಂದೇನಿಲ್ಲ. ಹಸುಗಳು ಎಲ್ಲೊ ಮೇಯ್ದ ಹುಲ್ಲನ್ನ ಇನ್ನೆಲ್ಲೊ ಮಲಗಿ ಪುರಸೊತ್ತಿನಲ್ಲಿ ಮೆಲುಕುಹಾಕ್ತ ಅಗೀತಾ ಇರ್‍ತಾವೆ ಗೊತ್ತಾ? ಹಾಗೆಯೆ ನೀವೂ ಬೆಳೀತ ಚಿಂತನೆಮಾಡ್ತ ಸಾಗಿರಿ. ನಿಜ ನಿಧಾನ ಅರಿವಾಗತ್ತೆ. ಅರಿವೆ ಗುರು ಅಂದಿಲ್ಲವೆ ನಮ್ಮ ಹಿರಿಯ ಶರಣರು? ಅಂಥ ಎಲ್ಲ ಒಳ್ಳೆಗುರುಗಳ ಆಶೀರ್ವಾದ ನಿಮ್ಮಮೇಲಿರಲಿ.

ಗುರುಪೂರ್ಣಿಮೆ * * * ನಿಮ್ಮ ಮೂರ್ತಿತಾತ